<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

<u>ಸಿ.ಸಿ. ನಂ. **146 / 2019**</u>

ಸಿಡಬ್ಲ್ಯೂ- **01**
ಪಿಡಬ್ಲ್ಯೂ-**01**

<u>ದಿನಾಂಕಃ **13.02.2025.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

ಸಾಕ್ಷಿಯ ಹೆಸರುಃ - ಹಣಮಂತಪ್ಪ
ತಂದೆಯ ಹೆಸರುಃ - ಮರೆಪ್ಪ
ವಯಸ್ಸುಃ -?**56** ವರ್ಷ
ಉದ್ಯೋಗಃ - ಶಿರಸ್ತೆದಾರರು ಪ್ರಧಾನ ದಿವಾಣಿ ನ್ಯಾಯಾಲಯ, ಶಹಾಪೂರ.
ವಾಸಸ್ಥಳಃ - ಶಹಾಪೂರ.

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>

ದಿನಾಂಕಃ 05.08.2019 ರಿಂದ 30.06.2021 ರವರ ವರೇಗೆ ನಾನು ಪ್ರಭಾರ ಮುಖ್ಯ ಆಡಳಿತ ಅಧಿಕಾರಿಗಳಾಗಿ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ

ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ ರವರು ದಿನಾಂಕಃ 25.07.2017 ರಂದು ನೋಟೀಪಿಕೇಶನ್ ಸಂಖ್ಯೆಃ 01/2017 ರಂತೆ ಸಿಪಾಯಿ ಹುದ್ದೆಗೆ ಅರ್ಜಿಯನ್ನು ಕರೆದಿದ್ದರು. ಆ ಪ್ರಕಾರ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ ರವರು ಆದೇಶ ಸಂಖ್ಯೆಃ20/2018 ರಂತೆ ದಿನಾಂಕಃ 06.03.2018 ರಂದು 25 ಜನರಿಗೆ ನೇಮಕಾತಿ ಆದೇಶವನ್ನು ನೀಡಿದ್ದರು. ಸದರಿ ಆಯ್ಕೆಯಾದ 25 ಜನರಿಗೆ ಮೂಲ ಅಂಕಪಟ್ಟಿಗಳನ್ನು ಹಾಗೂ ಸಂಬಂದಪಟ್ಟ ದಾಖಲೆಗಳನ್ನು ಹಾಜರುಪಡಿಸಬೇಕು ಹಾಗೂ ಅವುಗಳಲ್ಲಿ ಏನಾದರು ಲೋಪದೋಷಗಳು ಕಂಡಬಂದಲ್ಲಿ ಅವರ ನೇಮಕಾತಿಯ ಆದೇಶಗಳನ್ನು ರದ್ದಪಡಿಸಲಾಗುತ್ತದೆ ಎಂಬ ಷರತ್ತಿನೊಂದಿಗೆ ನೇಮಕಾತಿ ಆದೇಶವನ್ನು ನೀಡಿದ್ದರು. ನಂತರ ಆಯ್ಕೆಯಾದ ವ್ಯಕ್ತಿಗಳ ಅಂಕಪಟ್ಟಿಗಳನ್ನು ಸಂಬಂದಪಟ್ಟ ಡಿ.ಡಿ.ಪಿ.ಐ ಮತ್ತು ಬಿ.ಇ.ಓ ರವರಿಗೆ ಕಳುಹಿಸಿಕೊಟ್ಟಿದ್ದೇವು. ಈ ಪ್ರಕರಣದ ಆರೋಪಿತಳಾ 7 ನೇ ತರಗತಿಯ ಮೂಲ ಅಂಕಪಟ್ಟಿಯನ್ನು ಡಿ.ಡಿ.ಪಿ. ಐ ಕಲಬುರಗಿ ರವರಿಗೆ ನೈಜತೆಯನ್ನು ಪರಿಶೀಲನೆ ಮಾಡಲು ಕಳುಹಿಸಿಕೊಟ್ಟಿದ್ದೇವು. ಸದರಿ ಅಧಿಕಾರಿಯು ತಮ್ಮ ಪತ್ರ

ಸಂಖ್ಯೆ: 3047 ದಿನಾಂಕಃ 14.02.2019 ರಂದು ಆರೋಪಿತಳು ಸರಕಾರಿ ಹಿರಿಯ ಪ್ರಥಮಿಕ ಶಾಲೆಯಲ್ಲಿ ಅಲಗೂಡು ನೇದ್ದರಲ್ಲಿ ಓದಿರುವುದಿಲ್ಲ ಮತ್ತು ಸದರಿ ಆರೋಪಿತಳ ಅಂಕಪಟ್ಟಿಯು ನೈಜತೆಯಿಂದ ಕೂಡಿರುವುದಿಲ್ಲ ಎಂದು ಪತ್ರವನ್ನು ಮಾನ್ಯ ಜಿಲ್ಲಾ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದರು. ಸದರಿ ಪತ್ರವನ್ನು ಬಿಇ.ಓ ರವರು ವರದಿಯನ್ನು ಡಿ,ಡಿ.ಪಿ.ಐ ರವರಿಗೆ ನೀಡಿದ್ದರು ಆ ಪ್ರಕಾರ ಅವರು ಪತ್ರವನ್ನು ಮಾನ್ಯ ಜಿಲ್ಲಾ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟದ್ದರು. ನಂತರ ದಿನಾಂಕಃ 26.02.2019 ರಂದು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಆರೋಪಿತಳಿಗೆ ನೋಟೀಸ್ ನೀಡಿದ್ದರು. ಅದಕ್ಕೆ ಆರೋಪಿತಳು ಉತ್ತರ ನೀಡಲು ಕಾಲವಾಕಾಶವನ್ನು ಕೇಳಿದ್ದರು ನಂತರ ಅದೇ ದಿನ ಮಾನ್ಯ ಜಿಲ್ಲ ಮತ್ತು ಸತ್ರ ನ್ಯಾಯಾಲಯವು ಸಂಖ್ಯೆ: 29/2019 ರಂತೆ ಆರೋಪಿತಳನ್ನು ಸೇವೆಯಿಂದ ತೆಗೆದುಹಾಕಲಾಗಿತ್ತು. ಸದರಿ ಸಮಯದಲ್ಲಿ ಮುಖ್ಯ ಆಡಳಿತಾಧಿಕಾರಿಯಾಗಿ ಶ್ರೀ. ವೆಂಕಟೇಶ ಮತ್ತು ಆಡಳಿತಾತ್ಮಕ ಶಿರಸ್ತೆದಾರರಾದ ಶ್ರೀ. ವಿ.ವಿ.ಕೇಸ್‌ಕಾರ ರವರು ಇದ್ದರು. ಆರೋಪಿತಳು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನೇಮಕಾತಿಯ ಪ್ರಾಧಿಕಾರಕ್ಕೆ ತಪ್ಪು ಅಂಕಪಟ್ಟಿಯನ್ನು ನೀಡಿ, ಸರ್ಕಾರದ ಹುದ್ದೆಗವನ್ನು ಪಡೆದು ಮೋಸ ಮಾಡಿರುತ್ತಾರೆ. ಆದ್ದರಿಂದ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆದೇಶ ಸಂಖ್ಯೆ 120//2019 ದಿನಾಂಕಃ 09.09.2019 ರಂತೆ ನಾನು ದಿನಾಂಕಃ 26.09.2019 ರಂದು ಖಾಸಗಿ ದೂರನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದೆ. ಸದರಿ ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸ.ಸ.ಅ ರವರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.